# ಶ್ರೀಮಾತೆಯವರ ಪತ್ರಗಳು – ೧೮

ಅನುವಾದ: ಪ್ರವ್ರಾಜಿಕಾ ಧರ್ಮಪ್ರಾಣಾ

**ಪತ್ರ – ೧೦೪**

ಶ್ರೀಶ್ರೀದುರ್ಗಾ

ಸೆಪ್ಟಂಬರ್, ೧೯೧೩

ಆಶ್ವಯುಜ ೩, ಶುಕ್ರವಾರ

ಶುಭವಾಗಲಿ.

ತಾಯಿ ಸರಯೂ, ನಿನ್ನ ಪತ್ರ ಸಿಕ್ಕಿ ಎಲ್ಲಿಲ್ಲದ ಆನಂದವನ್ನು ಪಡೆದೆ. ನಿನಗೆ ಕಾಯಿಲೆಯಾಗಿದೆ ಎಂದು ಕೇಳಿ ದುಃಖವಾಯಿತು. ಶ್ರೀಠಾಕೂರರು ಆದಷ್ಟು ಬೇಗ ವಾಸಿಯಾಗುವಂತೆ ಮಾಡಲಿ. ಅಲ್ಲದೆ ನಾನೂ ಆಶೀರ್ವಾದ ಮಾಡುತ್ತಿದ್ದೇನೆ. ಇನ್ನು ಹೆಚ್ಚೇನು ಬರೆಯಲಿ? ಇಲ್ಲಿ ಎಲ್ಲರೂ ಚೆನ್ನಾಗಿದ್ದಾರೆಂದು ತಿಳಿ. ಅಲ್ಲಿ ಎಲ್ಲರಿಗೂ ನನ್ನ ಆಶೀರ್ವಾದ ತಿಳಿಸು.

ಇತಿ ನಿನ್ನ ತಾಯಿ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*ಪರಮ ಶುಭಪ್ರದಳಾದ,*
*ಶ್ರೀಮತಿ ಸರಯೂ ಬಾಲಾ ದಾಸಿ*
*೨೫ ನಂ ಕಾಂಕುಲಿಯಾ ರೋಡ್, ಬಾಲಿಗಂಜ್ – ಕಲ್ಕತ್ತಾ*
*Calcatta*

**ಪತ್ರ – ೧೦೫**

ಶ್ರೀ ಶ್ರೀ ದುರ್ಗಾ ಶರಣಂ

೧೫.೧೦.೧೯೧೩
Udvodhan office
12,13,Gopal Chandra Neogi Lane
Baghbazar P.O. Calcatta
೨೯ನೇ ಕಾರ್ತಿಕ

ಶುಭವಾಗಲಿ.

ನಿನ್ನ ಪತ್ರವು ಸಿಕ್ಕಿ ಸಮಾಧಾನವಾಯಿತು. ನಿನಗೆ ನನ್ನ ವಿಜಯ ದಶಮಿಯ ಆಶೀರ್ವಾದಗಳು.

ಇತಿ, ನಿನ್ನ ತಾಯಿ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*Sriman Surendra Nath Gupta*
*C/o Sj. Baikunta Nath Gupta*
*Vil [Vill] Haripur*
*Sylhet*

**ಸೂಚನೆ:** ಪತ್ರ – ೧೦೬ ಮತ್ತು ೧೧೦ : ಶ್ರೀ ಠಾಕೂರರ ಮೇಲೆ ಅತ್ಯಂತ ಭಕ್ತಿಯಿಂದಿದ್ದ ಈ ಭಕ್ತನು ಅವರ ಪದತಲದಲ್ಲಿ ಶರಣಾಗತರಾಗಲು ಇಚ್ಛಿಸುವ ಭಕ್ತರಿಗೆ ತಾನೇ ಮಂತ್ರದೀಕ್ಷೆ ನೀಡಲು ನಿಶ್ಚಯಿಸಿ, ಅದಕ್ಕಾಗಿ ಶ್ರೀಮಾತೆಯವರ ಸಮ್ಮತಿಗಾಗಿ ಅವರಿಗೆ ಪತ್ರ ಬರೆದನು. ಅದಕ್ಕೆ ಶ್ರೀಮಾತೆಯವರು ಉತ್ತರವಾಗಿ ಒಂದು ಪತ್ರದಲ್ಲಿ ತಮ್ಮ ಸಮ್ಮತಿಯನ್ನು ನೀಡಿದ್ದರೂ ಆಮೇಲೆ ಇನ್ನೊಂದು ಪತ್ರವನ್ನು ಬರೆದು ಈ ಕಾರ್ಯದಲ್ಲಿ ಎಚ್ಚರಿಕೆಯನ್ನು ನೀಡಿ, ತಮ್ಮ ಅಸಮ್ಮತಿಯನ್ನು ಸೂಚಿಸಿದ್ದಾರೆ. ಅಂತೆಯೇ ಮಾತೆಯ ನಿರ್ದೇಶನವನ್ನು ಪಾಲಿಸಿ, ಈ ಭಕ್ತನು ಈ ಕಾರ್ಯದಿಂದ ವಿಮುಖನಾದನು.

**ಪತ್ರ – ೧೦೬**

Udbodhan Office
12,13, Gopal Chandra Neogi Lane
Baghbazar P.O. Calcutta

ಶುಭವಾಗಲಿ.

ನಿನ್ನ ಪತ್ರವು ಸಿಕ್ಕಿ ವಿಸ್ತಾರವಾಗಿ ಎಲ್ಲವನ್ನೂ ತಿಳಿದುಕೊಂಡೆ. ನೀನು ಬರೆದಿರುವ ಏನೆಂದರೆ, ಶ್ರೀಶ್ರೀಠಾಕೂರರ ಚರಣದಲ್ಲಿ ಶರಣಾಗತರಾಗಲು ಇಚ್ಛಿಸುವ ಭಕ್ತಾದಿಗಳಿಗೆ ನೀನು ಶ್ರೀ ಶ್ರೀ ಠಾಕೂರರ ಮಂತ್ರವನ್ನು ದೀಕ್ಷೆಯಾಗಿ ಕೊಡಲು ಸಾಧ್ಯವೇ ಎಂದು. ಇದಕ್ಕೆ ಉತ್ತರವಾಗಿ ನನ್ನ ಅಭಿಪ್ರಾಯವೇನೆಂದರೆ, ಯಾರಿಗೂ ದೀಕ್ಷೆಯನ್ನು ಕೊಡಲು ನೀನು ಸಮರ್ಥನು ಹಾಗೂ ಅರ್ಹನು ಎಂದು ತೋರಿ, ಒಂದು ವೇಳೆ ನಿನಗೆ ನಿನ್ನಲ್ಲಿ ಆ ಶಕ್ತಿ, ಭರವಸೆ, ಮತ್ತು ವಿಶ್ವಾಸ ಇದ್ದರೆ ನೀನು ದೀಕ್ಷೆಯನ್ನು ಕೊಡಬಹುದು. ಇದಕ್ಕೆ ನನ್ನ ಯಾವುದೇ ಆಕ್ಷೇಪಣೆ ಇಲ್ಲ. ಠಾಕೂರರ ನಾಮವನ್ನು ಬ್ರಾಹ್ಮಣರಿಂದ ಹಿಡಿದು ಚಂಡಾಲರವರೆಗೆ ಎಲ್ಲರಿಗೂ ಕೊಡಲು ಸಾಧ್ಯ.'ಕ್ಲೀಂ' ಬೀಜವನ್ನು ನಾಮದ ಜೊತೆಯಲ್ಲಿ ಸೇರಿಸಿದರೆ ಸಾಕು. ಬ್ರಾಹ್ಮಣನಿಗೆ ಶಕ್ತಿ ಮಂತ್ರವನ್ನೂ ದೀಕ್ಷೆ ಕೊಡಬಹುದು. ಆದರೆ ಉಳಿದ ಜಾತಿಯವರಿಗೆ ಕೊಡಬಾರದು. ಆದರೂ ಒಂದು ಪಕ್ಷ ಬೇರೆ ಯಾವುದಾದರೂ ಜಾತಿಯ ಯಾವುದಾದರೂ ವಂಶದಲ್ಲಿ ಪರಂಪರೆಯಾಗಿ ಶಕ್ತಿ ಮಂತ್ರ, ದೀಕ್ಷೆ ನಡೆದುಕೊಂಡು ಬರುತ್ತಿದ್ದರೆ ಆ ವಿಶೇಷ ವಂಶದ ಜನರಿಗೆ ಶಕ್ತಿ ಮಂತ್ರ ನೀಡಲು ಸಾಧ್ಯ. ಆಮೇಲೆ ಇನ್ನೊಂದು ವಿಷಯ, ಮಂತ್ರ ನೀಡು

ವುದಾದರೆ ಸ್ವಂತ ಇಷ್ಟಮಂತ್ರ ಯಾವತ್ತೂ ಯಾರಿಗೂ ಕೊಡ ಬೇಡ. ಇಲ್ಲಿ ಎಲ್ಲವೂ ಕ್ಷೇಮ. ನಿಮಗೆಲ್ಲರಿಗೂ ನನ್ನ ಆಶೀರ್ವಾದ.

ಇತಿ , ಆಶೀರ್ವಾದಗಳೊಂದಿಗೆ,
ನಿಮ್ಮೆಲ್ಲರ ತಾಯಿ

***ಪತ್ರ ಪಡೆದವರ ಹೆಸರು:***

*ತಾರಕನಾಥ್ ರಾಯ್ ಚೌಧುರಿ ( ಬಹುಶಃ ಇರಬಹುದು )*

**ಸೂಚನೆ:** ಈ ಪತ್ರ ಬರೆದು ಮುಂದಿನ ಪತ್ರದಲ್ಲಿಯೇ ಈ ಭಕ್ತನ ಕಲ್ಯಾಣಕ್ಕಾಗಿ ದೀಕ್ಷೆ ಕೊಡುವ ವಿಷಯದಲ್ಲಿ ಶ್ರೀಮಾತೆ ಯವರು ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸುವರು. ಮಾತ್ರವಲ್ಲ ; ಶ್ರೀಮಾತೆಯವರ ಜೊತೆಯಲ್ಲಿದ್ದ ಶಿಷ್ಯ ಕಪಿಲ್ ಮಹಾರಾಜ್ ದೀಕ್ಷೆ ಕೊಡುವ ವಿಷಯದಲ್ಲಿ ತಮ್ಮ ಅಭಿಪ್ರಾಯ ವನ್ನು ತಿಳಿಸಿ, ಈ ಭಕ್ತನಿಗೆ ಎಚ್ಚರಿಕೆಯನ್ನು ನೀಡಿ ಪತ್ರ ಬರೆದು, ಶ್ರೀಮಾತೆಯವರ ಪತ್ರದ ಜೊತೆಯಲ್ಲಿ ಕಳುಹಿಸಿದ್ದಾರೆ. ಆ ಪತ್ರದ ಅನುವಾದವನ್ನೂ ಕೆಳಗೆ ಕೊಡಲಾಗಿದೆ.

## ಪತ್ರ - ೧೧೦

೧.೧.೧೯೧೪

೮ನೇ ಮಾಘ, 'ಉದ್ಬೋಧನ '

ಶುಭವಾಗಲಿ.

ಮಗೂ, ನಿನಗೆ ನನ್ನ ಆಶೀರ್ವಾದ. ಸೊಸೆಗೆ ಕಾಯಿಲೆ ಯಾಗಿದೆ ಎಂದು ಕೇಳಿ ದುಃಖವಾಯಿತು. ಅವಳಿಗೆ ನನ್ನ ಆಶೀ ರ್ವಾದ ತಿಳಿಸು. ಮಂತ್ರದೀಕ್ಷೆಯನ್ನು ನೀಡುವ ಸಾಹಸ ಮಾಡ ದಿರು. ಕೊಡದಿರುವುದೇ ಉತ್ತಮ. ಇಲ್ಲಿ ಎಲ್ಲವೂ ಕ್ಷೇಮ. ನಾನು ಚೆನ್ನಾಗಿದ್ದೇನೆ.

ಇತಿ ಆಶೀರ್ವಾದ ನೀಡುತ್ತಿರುವ
ನಿನ್ನ ತಾಯಿ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*Sriman Taraknath Roy Chowdhury*
*Sub Registrar,*
*Manahardi ( Dacca )*

**ಕಪಿಲ್ ಮಹಾರಾಜ್ ಬರೆದಿರುವ ಪತ್ರ**

ಶ್ರದ್ಧೇಯ,

ಎರಡು ತಿಂಗಳು ಕೇದಾರ ಬದರಿ ಮೊದಲಾದ ಸ್ಥಳಗಳಿಗೆ ತೀರ್ಥಯಾತ್ರೆ ಮಾಡಿ ಮರಳಿ ಇಲ್ಲಿಗೆ ಬಂದಿದ್ದೇನೆ. ನಿಮ್ಮ ನಿರ್ಧಾರವನ್ನು ಬದಲಿಸಿದಿರಿ ಎಂಬುದನ್ನು ತಿಳಿಸಿ ಸಮಾಧಾನ ವನ್ನು ಕೊಡಿ. ನೀವು ಯಾರಿಗಾದರೂ ದೀಕ್ಷೆಯನ್ನು ಕೊಡುವ ವಿಷಯದ ಬಗ್ಗೆ ನನ್ನ ವೈಯಕ್ತಿಕವಾದ ಕೆಲವು ಮಾತುಗಳಿವೆ. ಅದನ್ನು ಕೆಳಗೆ ತಿಳಿಸುತ್ತಿದ್ದೇನೆ.

ಶ್ರೀಮಾತೆಯವರು ಹಾಗೂ ಪೂಜನೀಯ ಶಾರದಾನಂದ ಮಹಾರಾಜ್ ಮೊದಲಾದ ಠಾಕೂರರ ಸಂನ್ಯಾಸಿ ಶಿಷ್ಯ ವೃಂದ ದವರು ಹೇಳಿರುವುದನ್ನು ನಾನು ಕೇಳಿದ್ದೇನೆ, ದೀಕ್ಷೆಯನ್ನು ಕೊಡುವವರು ಗುರು ಆಗುತ್ತಾರೆ ಮತ್ತು ಗುರು ಶಿಷ್ಯರ ಸಕಲ ಪಾಪಗಳಿಗೆ ಹೊಣೆಗಾರರಾಗುತ್ತಾರೆ. ಒಂದು ವೇಳೆ ಗುರುವು ಸಿದ್ಧ ಮಹಾಪುರುಷನಾದರೆ ಅವನಿಗೆ ಯಾವ ಹಾನಿಯೂ ಬರುವುದಿಲ್ಲ. ಅದಲ್ಲದಿದ್ದರೆ ಗುರು ಭಯಂಕರ ಅಪಾಯದ ಅಪಾರ ಸಮುದ್ರಕ್ಕೆ ಬೀಳಬೇಕಾಗಬಹುದು.

ನಮ್ಮ ಮಠದಲ್ಲಿ ಈಗ ಇರುವ ಸಂನ್ಯಾಸಿಗಳ ಮಧ್ಯೆ ಒಬ್ಬರು ಸಂನ್ಯಾಸಿಗಳಲ್ಲದೆ ಇನ್ನು ಯಾರೂ ಯಾರಿಗೂ ದೀಕ್ಷೆಯನ್ನು ಕೊಡುತ್ತಿಲ್ಲ. ಇನ್ನೇನು, ಪೂಜನೀಯ ಪ್ರೇಮಾನಂದ ಮಹಾ ರಾಜ್ ಮತ್ತು ಶಾರದಾನಂದ ಮಹಾರಾಜರೂ ಸಹ ಕೊಡುತ್ತಿಲ್ಲ.

ನನ್ನ ಈ ಮಾತುಗಳನ್ನು ಒಂದು ಸಲ ಚಿಂತಿಸಿ ನೋಡುವಿ ರೆಂದು ಆಶಿಸುತ್ತೇನೆ. ಇಲ್ಲಿ ಎಲ್ಲವೂ ಕ್ಷೇಮ. ನೀವು ಪತ್ನಿ ಸಮೇತ ನನ್ನ ಪ್ರಣಾಮ ಸ್ವೀಕರಿಸಿ.

ಇತಿ ನಮಸ್ಕಾರದೊಂದಿಗೆ,
ಕಪಿಲ್

## ಪತ್ರ - ೧೧೭

ಶ್ರೀ ಶ್ರೀ ದುರ್ಗಾಮಾತಾ

೧೮.೧೨.೧೯೧೩
ಪೌಷ ೩, ಲಕ್ಷ್ಮಿವಾರ

ತಾಯಿ ಸರಯೂ,

ನಿನ್ನ ಪತ್ರವು ಸಿಕ್ಕಿದೆ. ಶರತ್ ಮಹಾರಾಜರಿಗೆ ಕಾಯಿಲೆ. ಇಂದಿಗೆ ೬, ೭ ದಿನಗಳಿಂದ ಅನ್ನ ಊಟ ಮಾಡಿಲ್ಲ. ಸ್ವಲ್ಪ ವಾಸಿ ಯಾಗಲಿ. ಶರತ್ ಮಹಾರಾಜ್ ಸ್ವಲ್ಪ ಹುಷಾರಾದರೆ ಹೋಗು ತ್ತೇನೆ. ನೀನು ಶೋಕಹರಣನನ್ನು ಒಂದು ಸಲ ಕಳುಹಿಸು. ನೀನು ಯಾವ ದಿನವೆಂದು ಹೇಳುವೆಯೋ ಆ ದಿನವೇ ಹೋಗುವೆನು. ಮತ್ತೆ ಇಲ್ಲಿ ಎಲ್ಲರೂ ಚೆನ್ನಾಗಿದ್ದಾರೆ. ರಾಧು ಒಂದು ರೀತಿ ಚೆನ್ನಾಗಿ ದ್ದಾಳೆ. ನಾನು ಶಾರೀರಿಕವಾಗಿ ಈಗ ಚೆನ್ನಾಗಿದ್ದೇನೆ. ನೀನು ಹೇಗಿ ರುವೆ ಎಂದು ಬರೆ. ಅಲ್ಲಿ ಎಲ್ಲರೂ ಹೇಗಿದ್ದಾರೆ. ನೀವೆಲ್ಲರೂ ಚೆನ್ನಾಗಿದ್ದೀರೆಂದು ಕೇಳಿ ಸಮಾಧಾನವಾಯಿತು. ನಿಮಗೆಲ್ಲರಿಗೂ ನನ್ನ ಆಶೀರ್ವಾದಗಳು.

ಇತಿ, ನಿನ್ನ ತಾಯಿ.

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*ಶ್ರೀಮತಿ ಸರಯೂ ಬಾಲಾ ದೇವಿ*
*25, Kankulia Road*
*Ballygange, Calcatta*